INDIAN JOURNAL OF HISTORY AND ARCHAEOLOGY
ISSN (e):2582-225X
Vol-4, Issue -1, May-June, 2022,
PageNo,37-46
Peer Reviewed Journal, Referred Journal

# ‘ಉಧೋ ಉಧೋ’ಕಾದಂಬರಿಯಲ್ಲಿ ಜಾತೀಯತೆ, ಶೋಷಣೆ ಮತ್ತು ಬಂಡಾಯದ ನೆಲೆ

**ಸಿದ್ದಪ್ಪಾಜಿ.ಎನ್.**[1]

ಭಾರತೀಯ ಸಮಾಜದಲ್ಲಿ ಜಾತಿವ್ಯವಸ್ಥೆ ಮೂಲಭೂತವಾದಿ ನೆಲೆಯಾಗಿ ರೂಪುಗೊಂಡಿದೆ. ಮಾನವನ ಸಾಮಾಜಿಕ ಬದುಕಿನೊಳಗೆ ಶ್ರೇಣೀಕೃತ ವ್ಯವಸ್ಥೆಯಾಗಿ ಇತರ ಸಮಾಜಗಳ ಮೇಲೆ ತನ್ನ ಪ್ರಭುತ್ವವನ್ನು ಸಾಧಿಸಿಕೊಂಡಿದೆ. ಸದಾ ಅವಮಾನ ಅಪಮಾನ ಕೀಳರಿಮೆಯಲ್ಲಿ ನರಕ ಅನುಭವಿಸುತ್ತ ನರಳುತ್ತಿರುವ ಅಸಂಖ್ಯಾತ ಕೆಳಜಾತಿಯ ಜನರ ಬದುಕು ಇಂಡಿಯಾದ ದೈನಂದಿನ ಸಾಮಾಜಿಕ ಸಾಂಸ್ಕೃತಿಕ ಜೀವನ ಸ್ಥಿತಿಯಾಗಿದೆ. ಇಲ್ಲಿ ಶಿಕ್ಷಣ, ರಾಜಕೀಯ, ಆಧುನಿಕ, ವಿಜ್ಞಾನ, ಕಲೆ ಸಾಹಿತ್ಯ ಯಾವುದು ಈ ಜಾತಿಯ ಮೂಲಭೂತವಾಗಿ ನೆಲೆಯ ಕೊಳಕಿನಿಂದ ಪೂರ್ಣವಾಗಿ ಮುಕ್ತವಾಗಿಲ್ಲ. ಏಕೆಂದರೆ ಜಾತಿ ಪದ್ಧತಿ ನಮ್ಮ ಸಾಮಾಜಿಕ ಬದುಕನ್ನು ನಿಯಂತ್ರಿಸುವ ಮತ್ತು ಮಿಲನಗೊಳಸುವ ಪ್ರಮುಖ ಸಾಧನವಾಗಿದೆ. ಪ್ರತಿಯೊಬ್ಬ ಮನುಷ್ಯನನ್ನು ಅವನ ಹುಟ್ಟಿನ ಆಧಾರದ ಮೂಲಕವೇ ಅಳೆಯುತ್ತ ‘ಸರ್ವೇ ಜನಾಃ ಸುಖಿನೋ ಭವಂತು’ ಅನ್ನುವ ಅತಿ ಉದಾರೀಕರಣವನ್ನು ಆದರ್ಶವನ್ನು ಬೋಧಿಸುತ್ತ ಸಾಮಾಜಿಕ ಬದಲಾವಣೆಗೆ ಆಧುನಿಕ ಸಮಾಜ ಒಳಗಾಗಿದೆ ಎಂದು ಸಮರ್ಥಿಸುವುದು ಕುತೂಹಲಕಾರಿ ಆದ ಅಂಶವಾಗಿದೆ”.[2]

ಉಧೋ ಉಧೋ ಕಾದಂಬರಿಯು ಮೇಲಿನ ಅಂಶಗಳನ್ನು ಚಿತ್ತರಿಸುತ್ತದೆ. ಸಾಮಾಜಿಕ ಪಿಡುಗನ್ನು ಗುರುತಿಸುತ್ತ ಜಾತೀಯತೆಯ ನಿಕೃಷ್ಟ ಆಚರಣೆಯ ಬಗೆಗೆ ವ್ಯವಸ್ಥೆಯಲ್ಲಿನ ಕೆಡಕುಗಳನ್ನು ಹೊರಗೆಳೆಯುವುದರ ಮೂಲಕ ಇತ್ತೀಚಿನವರೆಗೂ ಜಾತಿಪದ್ಧತಿ ಅನುಸರಣ ಮೂಲವಾಗಿಸಿಕೊಂಡು ಸಮಾಜಗಳ ನಗ್ನ ಚಿತ್ರಣವನ್ನು ಬಯಲುಗೊಳಸುತ್ತ ಅದು ಮನುಷ್ಯ ಬದುಕಿನ ಒಂದು ಭಾಗವಾಗಿ ಮುಂದುವರಿದುಕೊಂಡು ಹೋಗುವ ದುರಂತ ಸಂದರ್ಭಗಳು ಈ ಕಾದಂಬರಿ ಮೂಲಕ ಅನಾವರಣಗೊಳಸಿದ್ದಾರೆ.

ಜಾತಿ ವ್ಯವಸ್ಥೆ ಮುಂದುವರೆಯುತ್ತಿರುವುದಕ್ಕೆ ಬರೀ ಮೇಲ್ಜಾತಿ ಜನಮಾತ್ರ ಕಾರಣವಲ್ಲ, ಜಾತಿ ವ್ಯವಸ್ಥೆಯನ್ನು ಒಪ್ಪಿಕೊಂಡು ಗುಲಾಮರಂತೆ ಈಗಲೂ ಅದನ್ನು ಪ್ರತಿಭಟಿಸದೆ ಇರುವವರಿಂದ ಅದು ಇನ್ನೂ ಜೀವಂತವಾಗಿಯೇ ಇದೆ. ದಲಿತರು ಶಿಕ್ಷಿತರಾಗಿ ಮೌಢ್ಯಾಚರಣೆಗಳನ್ನು ಬಿಟ್ಟು ಸವಲತ್ತುಗಳನ್ನು

---

[1].**ಸಂಶೋಧಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು**

2 ಡಾ.ಬಾಳಾಸಾಹೇಬ ಲೋಕಾಪುರ, ಕಥನ ಸಂವಾದ (ಸಂ) ವೆಂಕಟಗಿರಿ ದಳವಾಯಿ, 2011, ಪುಟ–210.

ಪಡೆದು ವೈಚಾರಿಕತೆಯನ್ನು ಜೀವನದಲ್ಲಿ ಅಳವಡಿಸಿಕೊಳ್ಳುವ ಅವಶ್ಯಕತೆ ಇದೆ. ಕಾಲಕ್ಕನುಗುಣವಾಗಿ ಜಾತಿವ್ಯವಸ್ಥೆ ಕೂಡ ತನ್ನ ವಿಸ್ತೃತರೂಪ ಪಡೆದು ತನ್ನ ಜಾಲವನ್ನು ವಿಸ್ತರಿಸಿಕೊಳ್ಳುತ್ತದೆ. ಒಂದು ಜಾತಿ ತನ್ನ ಹಿಂದಿನ ತನಕ್ಕಿಂತ ಹೆಚ್ಚಿನದ್ದನ್ನು ತನ್ನೆಡೆಗೆ ಸೇರಿಸಿಕೊಳ್ಳುತ್ತ ಪ್ರತಿಷ್ಠೆಗೆ ಧಕ್ಕೆ ಬರದಂತೆ ನೋಡಿಕೊಳ್ಳುತ್ತಿರುತ್ತದೆ. ವೈಚಾರಿಕವಾಗಿ, ತಾತ್ವಿಕವಾಗಿ ಸಮಾಜ ಎಷ್ಟೇ ಬದಲಾದರೂ ಜಾತೀಯತೆ ತನ್ನ ಅಸ್ತಿತ್ವವನ್ನು ಕಾಪಾಡಿಕೊಂಡೇ ಬರುತ್ತದೆ.

"ಜಾತಿಯ ಬಾಗಿಲನ್ನುತೆರೆಯಲು ಹಾಗೆಯೇ ಮುಚ್ಚಿಕೊಳ್ಳಲು ಎರಡೂ ರೀತಿಯ ಕ್ರಿಯೆಗಳಿಗೆ ನಿರಂತರವಾಗಿ ಒಳಗಾಗಿದೆ. ಆಧುನಿಕತೆಯಲ್ಲಿ ಜಾತಿ ಸಮುದಾಯಗಳಿಗೆ ರೂಪವಿರೂಪ ಎರಡು ಗುಣಗಳನ್ನು ಒಂದೇ ಬಾರಿಗೆ ನೀಡಬಲ್ಲದು. ಆದರೆ ಜಾತಿಯ ವಿರೂಪವೇ ಆಧುನಿಕತೆಗೆ ಹೆಚ್ಚು ಆಪ್ತವಾದಂತೆ ಕಾಣುತ್ತದೆ. ವಾಸಹತುಶಾಹಿ ಜಗತ್ತಿನ ಜೊತೆ ಮುಖಾಮುಖಿಯಾಗಬೇಕಾದ ಸಂದರ್ಭದಲ್ಲಿ ದಲಿತ ಶೂದ್ರ ಸಮುದಾಯಗಳ ತಮ್ಮ ಗತಕಾಲದ ಪರಂಪರೆಯನ್ನು ಮತ್ತಷ್ಟು ಗಾಢವಾಗಿ ವಿಸ್ತರಿಸಿಕೊಳ್ಳಲು ಸಾಧ್ಯವಿತ್ತು. ಆದರೆ ಅಂತಹ ಸಂವರ್ಧನೆಯ ದಾರಿಯಲ್ಲಿ ಜಾತಿಗಳು ಪಯಣಿಸದೆ ತಮ್ಮ ಗತಕಾಲದ ಸ್ಮೃತಿಗಳೇ ವರ್ತಮಾನಕ್ಕೆ ಬೇಡ ಎಂದು ಉದ್ದೇಶ ಪೂರ್ವಕವಾಗಿಯೇ ದೂರ ಉಳಿದವು".[3]

ಉತ್ಪಾದನ ವ್ಯವಸ್ಥೆಯಾಗಿ, ಜೀವನ ಕ್ರಮವಾಗಿ ಎರಡು ರೀತಿಯಲ್ಲಿ ಜಾತಿ ಆಚರಣೆ ಇರುತ್ತದೆ. ಕಸುಬಿನ ಹಿನ್ನಲೆಯಲ್ಲಿ ಜಾತೀಯತೆ ವ್ಯಕ್ತಿಗತವಾಗಿ ಇರುತ್ತದೆ. ಈ ಎರಡು ಸ್ತರದ ನೆಲೆಯಲ್ಲಿ ಕಾದಂಬರಿ ವಸ್ತುವಿನ ಬೆಳವಣಿಗೆಯಿಂದ ಮೇಲ್ಜಾತಿಯ ವ್ಯವಸ್ಥೆ ಕೆಳಜಾತಿ ವ್ಯವಸ್ಥೆಯೆಂದು ವರ್ಗೀಕರಣಗೊಂಡಿದೆ. ಮೇಲ್ಜಾತಿಯ ಜನ ವ್ಯವಸ್ಥೆ ಶೋಷಣೆಯ ಮೂಲವಾಗಿದ್ದರೆ, ಕೆಳಜಾತಿ ವ್ಯವಸ್ಥೆ ಮೌಢ್ಯದ ಮೇಲೆ ನಿಂತಿರುತ್ತದೆ. ಅವರವರ ಜಾತಿಕಟ್ಟು ಪಾಡು ಯಾರಿಗೂ, ಯಾವುದೇ ವ್ಯವಸ್ಥೆಗೂ ಅಡ್ಡ ಬರುವುದಿಲ್ಲ, ಎಂದು ಅಂದುಕೊಂಡಿರುತ್ತಾರೆ.

ಕರ್ನಾಟಕ ಮತ್ತು ಮಹಾರಾಷ್ಟ್ರದ ಗಡಿಭಾಗದ ಹಳ್ಳಿ ಈ ನಂದೋವಾಡಿ ಗ್ರಾಮ ಅನೇಕ ಜಾತಿಗಳ ಜನ ಇಲ್ಲಿ ವಾಸಿಸುತ್ತಿದ್ದಾರೆ. ಒಂದೆಡೆ ಜೈನರು, ಕುರುಬರು, ಬಡಿಗೇರರು, ಉಪ್ಪಾರರು ಇದ್ದಾರೆ. ಊರಿನ ಕೊನೆ ತುದಿಯಲ್ಲಿ ಹೊಲೆಯರ ಓಣಿ ಇದೆ. ಇದರ ಪಕ್ಕದಲ್ಲಿ ಅವರ ಆರಾಧ್ಯ ದೈವ ಯಲ್ಲಮ್ಮನ ಗುಡಿ ಕಟ್ಟಿದ್ದಾರೆ. ಎಲ್ಲಮ್ಮ ಊರಿನ ಕೇಂದ್ರ ಬಿಂದು ಇಲ್ಲಿ ನಡೆಯುವ ಎಲ್ಲ ಕಾರ್ಯಗಳಿಗೂ ಕಾರಣೀಭೂತಳೆಂದು ನಂಬಿರುವ ಜನರಿದ್ದಾರೆ. ಇವಳನ್ನು ಎದುರು ಹಾಕಿಕೊಂಡವರ ಜೀವನದಲ್ಲಿ ಕ್ಷುದ್ರ ಜೀವಿಯಾಗಿಬಿಡುವ ಭಯ ಇಲ್ಲಿನ ಜನರಿಗಿದೆ. ಇಲ್ಲಿನ ದಲಿತರು ಸ್ಥಾವರವಾದ ಯಲ್ಲಮ್ಮ ದೈವಶಕ್ತಿಯನ್ನು ಮೀರಿ ಹೊರಬಾರದ ಸ್ಥಿತಿಯಲ್ಲಿ ಇರಲಾರದೆ ಅವಮಾನ ಅಪಮಾನಕ್ಕೆ ಈಡಾಗಿದ್ದಾರೆ. ಇದು ದಲಿತ ಮೌಢ್ಯ ಆಚರಣೆ ನಿಷ್ಕರುಣ ಸ್ಥಿತಿ. ಅವಲಂಬಿ ಜೀವಿಗಳಾಗಿ ಇಲ್ಲಿ ದಲಿತರ ಸಂಪೂರ್ಣ

3 ದಲಿತಕಥನ – ಡಾ.ಮೊಗಳ್ಳಿ ಗಣೇಶ್, ಪುಟ–52.

ಸವರ್ಣೀಯರನ್ನು ನಂಬಿ ಜೀವನ ನಡೆಸುತ್ತಿದ್ದಾರೆ. ಮೇಲ್ಜಾತಿ ಜನರ ಪಾಲಿಗೆ ಒಂದು ಬಾವಿ ಇದೆ. ಇದು ಇಲ್ಲಿನ ಅನೇಕ ಸಮಸ್ಯೆಗೂ ಕಾರಣವನ್ನು ಒಡ್ಡಬಲ್ಲದು. ದಲಿತರ ಮೇಲೆ ಅಕ್ಕರೆಯನ್ನಿಟ್ಟುಕೊಂಡಿದ್ದ 'ಗುಂಡೋಪಂತ ದೇಸಾಯಿ' ಈ ಬಾವಿಯಲ್ಲಿ ದಲಿತರಿಗೆ ನೀರು ಕೊಡಲು ಒಂದು ಆಳನ್ನು ನೇಮಿಸಿದನು. ಇತ್ತೀಚೆಗೆ ಅವರ ಮರಣಾ ನಂತರ ಅಸ್ಪ್ರಶ್ಯರೆನಿಸಿಕೊಂಡ ಹೊಲೆಯರಂತಹವರು ಮೇಲ್ಜಾತಿ ಜನ ಬೆಳಗಿನಿಂದ ಮಧ್ಯಾಹ್ನದವರೆಗೆ ನೀರು ತೆಗೆದುಕೊಳ್ಳುವರೆಗೂ ಬಾವಿಯಲ್ಲಿ ನೀರು ತರುವ ಹಾಗಿಲ್ಲ. ನಂತರ ಮಧ್ಯಾಹ್ನದಲ್ಲಿ ಗೊತ್ತು ಮಾಡಿದ ವೇಳೆಯಲ್ಲಿ ಅವರು ಮೇಲ್ಜಾತಿಯ ಯಾರದರೂ ಒಬ್ಬರು ಬಂದು ನೀರು ಹಾಕುತ್ತಿದ್ದರು. ಎಷ್ಟೇ ಸಾಯುವ ಪರಿಸ್ಥಿತಿ ಆದರೂ ಅಲ್ಲಿಯವರೆಗೂ ಇವರು ಬಾವಿಯಲ್ಲಿ ನೀರನ್ನು ತರುವ ಹಾಗಿರಲಿಲ್ಲ. ನಾಯಿಗಳಂತೆ ಕೂತು ಕಾಯುವ ಸ್ಥಿತಿ ಎದುರಾಗಿದೆ. ಈ ಕಟ್ಟುನಿಟ್ಟಿನ ಕ್ರಿಯೆಯಲ್ಲಿ ವ್ಯತ್ಯಾಸ ಕಂಡುಬರದಂತೆ ನಿಗಾವಹಿಸಲಾಗಿತ್ತು. ಅಂತಹ ಸಂದರ್ಭ ಬಂದರೆ ಪ್ರಾಣಕ್ಕಿಂತ ಈ ನಿಯಮವೇ ಮುಖ್ಯವಾಗಿತ್ತು. ಈ ಕಟ್ಟುನಿಟ್ಟಿನ ಆಚರಣೆ ತಮಗೆ ಇಷ್ಟ ಪಟ್ಟ ರೀತಿ ಮೇಲಿನ ಜಾತಿಯವರು ಬದಲಾಯಿಸಿಕೊಳ್ಳಬಹುದು, ಈ ಹಕ್ಕು ದಲಿತರಿಗೆ ಇರಲಿಲ್ಲ.

ಪರಪ್ಪ ಸವಕಾರರ ಜೈನನಾಗಿದ್ದ ಮತ್ತು ಚಂಪವ್ವ ಇವನನ್ನು ದೈಹಿಕವಾಗಿ ಮೋಹಿಸಿದ ಚೆಲುವೆ. ಇವರ ಇಬ್ಬರ ಸಂಬಂಧ ಇಡೀ ಹಳ್ಳಿಗೆ ಗೊತ್ತಿರುವ ವಿಚಾರ. ಚಂಪವ್ವ ಪರಪ್ಪ ಅತಿಭೋಗದಿಂದ ಕಾಮಾಂಧರಾಗಿದ್ದವರು. ಪರಪ್ಪನು ಚಂಪವ್ವನಿಗಾಗಿ ಒಂದು ಮನೆಯನ್ನೇ ಕಟ್ಟಿಸಿಕೊಟ್ಟಿದ್ದ. ಅವಳು ಅಷ್ಟೇ ಹಣಕ್ಕೆ ಹೆಚ್ಚು ಮೌಲ್ಯ ಕೊಡುವ ಹೆಂಗಸು. ಮೀರ ಸಾಬನನ್ನು ನೆಪ ಮಾತ್ರಕ್ಕೆ ಮೋಹಿಸಿ ಅವನಿಂದ ಹೆಂಡ ತರಿಸಿಕೊಂಡ ಕುಡಿಯುತ್ತಿದ್ದಳು. ಹಣವನ್ನು ಸೂರೆಗೊಂಡಳು ಕಡೆವರೆಗೂ ಅವನೊಂದಿಗೆ ಬೆರೆಯಲೇ ಇಲ್ಲ. ಇದೇ ಅಲ್ಲದೆ ದತ್ತೂರಿ ಚಂಪವ್ವನ ಮನೆಗೆ ಬಂದ ನಾನು ಒಂದು ದಿನ ಈ ಮನೆಯಲ್ಲೇ ಮಲಗಬೇಕು ಎಂದಾಗ "ನಡೀಯೋ ಭಾಡ್ಯಾ ಈ ಮನಿ ನಿನ್ನಂತ ಚಿಕನೇಸಿಗೆ ಅಲ್ಲಾ ಹಾಂಗ ಇಲ್ಲಿ ಇರಾಕ ಬಕಾಂವ ರೊಕ್ಕಾ ಕಟಗೊಂಡ ಬಾ.."[4] ಎಂದಿದ್ದಳು. ಅಂತಹ ಕೆಟ್ಟಗುಣ ಇವಳಲ್ಲಿ ಇರಳಿಲ್ಲ, ಮಗ ಮಾಣಿಕ್ಯನನ್ನ ಸಲಹಿದ ತಾಯ್ತನ ಇರುವ ಹೃದಯವಂತೆ ಚಂಪವ್ವ ತನ್ನ ಸಾಕಿದ ಮಗ ಮಾಣಿಕ್ಯ ಬಿಟ್ಟು ಸತ್ತಗಳಿಗೆ ಯಲ್ಲೆ ಅವಳ ಸಾಮಾನುಗಳನ್ನು ಮುಖ್ಯವಾಗಿ ಬೇಡದವುಗಳನೆಲ್ಲ ತುಂಬಿ ಊರಾಚೆ ಸುರಿದು ಬಾಕಿ ಉಳಿದ ಮುಖ್ಯವಾಗಿ ಬೆಲೆ ಬಾಳುವ ಟಕ್ಕಿ, ಏಕಸರಾ, ಸಂಗಿ, ನಡದಾಗಿನ ಗೆಜ್ಜೆದಾಬ ಏಳುಮುತ್ತಿನ ಮೂಗಬಟ್ಟು, ನತ್ತು, ರೇಸಿಮೆ ಸೀರೆ ಇತ್ಯಾದಿ ಎಲ್ಲವನ್ನು ವಶಪಡಿಸಿಕೊಂಡನು. ಜನರೆಲ್ಲ ಇವನನ್ನು "ಸೂಳಿಬದಕ ತಿಂದ್ರ ನರಕ ಆದೀತೋ ಪರಪ್ಪ.. ಜೈನರ ಜ್ಯಾತ್ಯಾಗ ಹುಟ್ಟಿ ಹಿಂತಾ ಕೆಲಸಾ ಮಾಡಬ್ಯಾಡ.." ಎಂದು ಬೈದರು, ಪರಪ್ಪ ಬಿಡಲಿಲ್ಲ. ಈಕೆ ಹೆಣವನ್ನು ಮುಟ್ಟದೆ ವಸ್ತುಗಳನ್ನು ಮಾತ್ರ ಸಾಗಿಸುತ್ತಾನೆ. ಈ ಮನುಷ್ಯ ತಾನಿರೋವರೆಗೆ ಅವಳನ್ನ ದೈಹಿಕವಾಗಿ ಬಳಸಿಕೊಂಡ

4 ಉಧೋ ಉಧೋ, ಡಾ.ಬಾಳಾ ಸಾಹೇಬ್ ಲೋಕಪುರ, 2005, ಪುಟ–26.

ಋಣಕ್ಕಾದರೂ ಅಂತ್ಯಕ್ರಿಯೆಯನ್ನು ಮಾಡದೆ, ದೋಚುವುದರಲ್ಲೆ ಲೀನವಾಗುತ್ತಾನೆ. ಇಲ್ಲಿ ಸೂಕ್ಷ್ಮವಾಗಿ ಗಮನಿಸಬೇಕಾದ ಅಂಶ ನೀ ಜೈನರ ಜ್ಯಾತ್ಯಾಗ ಹುಟ್ಟಿ ಎಲ್ಲ ಜಾತಿ ಜನರಲ್ಲೂ ಇಂತಹ ನೀಚರು, ಭ್ರಷ್ಟರು ಇದ್ದೇ ಇರುತ್ತಾರೆ. ಅದಕ್ಕೆ ಬೇರೆ ಜಾತಿ ಸೂಚಕ ಪದದ ಅವಶ್ಯಕತೆ ಇರುವುದಿಲ್ಲ. ಯಾವುದೇ ಗುಣ ವ್ಯಕ್ತಿಗತವಾಗಿ ಬರುತ್ತದೆಯೋ ವಿನಃ ಜಾತಿಗತವಾಗಿ ಯಾವ ಗುಣವೂ ಮನುಷ್ಯನಿಗೆ ಬರುವುದಿಲ್ಲ.[5]

ಸಮಾಜವನ್ನು ಬದಲಾವಣೆ ಮಾಡುವ ಪರಿವರ್ತನೆ ಮಾಡುವ ಕೆಲವು ಪಾತ್ರಗಳು ಇಲ್ಲಿ ಮುಖ್ಯವಾಗಿವೆ. ಏಕತಾರಿಬಾಬ, ಕಾಂಗ್ರೆಸ್ ದೇವಪ್ಪ ಕೆಲವು ಪಾತ್ರಗಳು ಇಲ್ಲಿ ಮುಖ್ಯವಾಗಿವೆ. ಏಕತಾರಿಬಾಬ, ಕಾಂಗ್ರೇಸ್ ದೇವಪ್ಪ, ದೇವೇಂದ್ರ ಮತ್ತು ಪಾರ್ವತಿ ಈ ನಿಟ್ಟಿನಲ್ಲಿ ಈ ಕಾದಂಬರಿಯಲ್ಲಿ ಕಂಡು ಬರುತ್ತದೆ. ಏಕತಾರಿಬಾಬ ಆಧ್ಯಾತ್ಮಕತೆಯೊಳಗೆ ಸಮಾನತೆ ಕಾಣುವವನಂತೆ ನಮಗಿಲ್ಲಿ ಕಂಡುಬರುತ್ತಾರೆ. ಎಲ್ಲ ಜಾತಿಯವರ ಜೊತೆ ಬೆರೆತು ಅವರ ಮನೆಗಳಲ್ಲಿ ಊಟಪಡೆದು ತಿನ್ನುವ ಸಂದರ್ಭ ಬಂದಾಗ ಸಹಾಯಕ್ಕೂ ಕೈ ಹಾಕುವವನಾಗಿದ್ದ. ಏಕತಾರಿ ಬಾಬನ ನಿಲುವುಗಳು ನಮ್ಮನ್ನು ದ್ವಂದ್ವಕ್ಕೆ ಈಡು ಮಾಡುತ್ತವೆ. ಕೆಲವು ಸಂದರ್ಭಗಳಲ್ಲಿ ಮೌನವಹಿಸುವುದರ ಮೂಲಕ ತಟಸ್ಥವಾಗಿ ಇರುವುದರ ಅರ್ಥ ನಮಗೆ ತಿಳಿಯುವುದಿಲ್ಲ. ಕೆಲವು ಸಂದರ್ಭಗಳನ್ನು ಗಮನಿಸುವುದಾದರೆ; ರೊಟ್ಟಿಯನ್ನು ಹೊಲಗೇರಿಯಲ್ಲಿ ಬೇಡಿ ತಿನ್ನುವುದರ ವಿರುದ್ಧ ಊರಿನ ಮೇಲ್ವರ್ಗದವರು ನೀವು ಬೇಡಿದ್ದ ಬೇಕಾದ್ದ ಎಲ್ಲಾ ಬಗಸ್ಯಾಗ ಹಿಡಾಂಗ ಅದೀವಿ. ಹಿಂಗ ಹೋಗಿ ಹೊಲಗೇರಿಯಾಂದ ಯಾಕ ತಿನಬೇಕ ನಿ" ಎಂದ ರಾಮಣ್ಣನ ಈ ಮಾತಿಗೆ ಅವಧೂತ ಏಕತಾರಿ ಬಾಬ ಶಂಬೋ ಭೋಳೇ ಶಂಕಾರ ಎಂದು ರಾಗವಾಗಿ ಹಾಡ ಹಾಡಲು ಶುರುಮಾಡಿದ.

"ಹಕ್ಕಿಗೆ ಹಾಲ ಬಾನವನಿಕ್ಕಿ
ಯಾರು ಹಾರಲು ಬಿಟ್ಟರೋ ಬಮ್ಮ
ಜೀವ ಜಾಲ ಲೀಲೇಯೋ ತಮ್ಮ
ಮೈಯ ಮೂಲದಲ್ಲಿ ಎಲ್ಲಿ ಮೈಲಿಗೆ ತಂದಿ
ಹೊಲೆ ಎಂಬುದು ಹೊಲ್ಲ ಕಾಣೋ ಬೊಮ್ಮ.."

ಎಂಬ ಹಾಡನ್ನ ಹಾಡಿ ಅವರಿಗೆ ತಿಳಿ ಹೇಳಲು ಪ್ರಯತ್ನಿಸಿದ. ಇದರ ಗುಂಗು ಇಲ್ಲದ ಅವರು ತಲೆಕಡೆಸಿಕೊಳ್ಳದೆ ಹೊರ ನಡೆದರು. ಮೇಲಿನ ಪದ್ಯದ ಸಾಲುಗಳು ತುಂಬಾ ಅರ್ಥ ಗರ್ಭಿತವಾದ ಸಾಲುಗಳು. ಮನುಷ್ಯನ ಸೃಷ್ಟಿಯನ್ನು ಇಲ್ಲಿ ಹಕ್ಕಿಗೆ ಹೋಲಿಸಿ ಜೀವನ ಅನ್ನೋ ಆಕಾಶಕ್ಕೆ ಹಾರಲು ಬಿಟ್ಟವರು ಯಾರು? ಉತ್ತರವಿಲ್ಲ ಜೀವ ಸಂಕುಲದ ಸೃಷ್ಟಿ ಅಚಾನಕ್ ಆದದ್ದು ಇದರ ನಡುವೆ ಜಾತಿಯ ಸೃಷ್ಟಿ ಮಾನವನದ್ದು ಪ್ರಕೃತಿ ಮುಂದೆ ಮಾವನ ಏನೇನೂ ಅಲ್ಲ. ಜಾತಿಗೆ ತಳಬುಡ ಒಂದೂ ಇಲ್ಲ ಜಾತಿ

5 ಪೂರ್ವೋಕ್ತ, ಪುಟ-20.47.

ತಾತ್ಕಾಲಿಕ ಜಾತಿ ನೆಲೆ ಇಲ್ಲದ್ದು ಅದರ ಮೇಲೆ ನಿಂತಿರುವ ಮಾನವರನ್ನು ವ್ಯಂಗ್ಯವಾಗಿ ನುಡಿದಿರುವ ಹಾಡಿನ ಸಾಲನ್ನು ಸೂಕ್ತ ಸಂದರ್ಭದಲ್ಲಿ ಏಕತಾರಿಬಾಬ ಆರಿಸಿ ಹೇಳಿದ್ದಾನೆ. ಏಕತಾರಿಬಾಬ ಮಠ ಕಟ್ಟುವುದುನ್ನು ಎಲ್ಲಮ್ಮನ ಗುಡಿ ನಿರ್ಮಾಣ ಆಗುವದನ್ನು ಬೇಡವೆಂದು ವಾದಿಸುತ್ತಾನೆ.

ಊರಲ್ಲಿ ಸಂಘರ್ಷ ಏರ್ಪಟ್ಟು ಎರಡು ಕೋಮಿನವರು ಮನಸ್ಸು ಮುರಿದು ಬಾವಿಗೆ ಕೀಲಿ ಹಾಕಿದ್ದಾಗ, ಏಕತಾರಿ ಬಾಬ ಅಲ್ಲಿಗೆ ಬಂದ ಮೈಯಲ್ಲಿದ್ದ ಕಂಬಳಿ ಚೆಲ್ಲಿ ಅದಕ್ಕೆ ತಂಬೂರಿ ಇಟ್ಟು, ಹೊಲೇರ ರೇಣುಕವ್ವನ ಕೊಡಪಾನ ತೆಗೆದುಕೊಂಡು ಬಾವಿಯ ಕಟಾಂಜನವನ್ನು ಹತ್ತಿದ ಅಲ್ಲಿದ್ದ ಹೊಲಗೇರಿಯವರು ಆಸೆಯಿಂದ ಮೇಲೆದ್ದರು. ಇದನ್ನು ಗಮನಿಸಿದ ಗೌಡರ ಅಪ್ಪಣ್ಣನು ಬಾವಿ ಬಳಿಗೆ ಮೇಲಪ್ಪನನ್ನು ಕಳುಹಿಸಿದ. ಬಂದವನು ಕುಡುಗೋಲು ತಗೆದುಕೊಂಡು ಜಳಪಿಸುತ್ತಾ ಬಾವಿಯ ಕಟ್ಟೆಯನ್ನು ಹತ್ತಿ ಕೈಯಲ್ಲಿ ಕೊಡ ಹಿಡಿದು ಹಗ್ಗವನ್ನು ಕತ್ತರಿಸುತ್ತಾನೆ. ಹಗ್ಗ ಕತ್ತರಿಸಿ ಏಕತಾರಿ ಬಾಬನನ್ನು ಗೇಲಿಮಾಡಿ ನಗುತ್ತಾನೆ. ಇದಕ್ಕೆ ಏಕತಾರಿಬಾಬ ಆಕಾಶ ನೋಡಿ ನಕ್ಕು ಹೆಜ್ಜೆ ಇಡುತ್ತಾನೆ. ಹೊಲಗೇರಿ ಜನರ ಆಸೆ ನಿರಾಸೆಯಾಗುತ್ತದೆ. ಇಲ್ಲಿ ಮೌನತಾಳಿದ ಏಕತಾರಿ ಬಾಬ ಸಂಶಯಕ್ಕೆ ಒಳಪಡುತ್ತಾನೆ. ಇಲ್ಲಿಯಾದರೂ ಪ್ರತಿಭಟಿಸುವನೇ ಏಕತಾರಿಬಾಬಾ ಎಂದವರಿಗೆ ನಿರಾಸೆಯಾಗುತ್ತದೆ. ಏಕಾತಾರಿ ಈ ಊರಿಗೆ ಬಂದು ಸೇರಿದವನು ಎಂತಲೋ ಎಲ್ಲ ಜಾತಿಯ ಅನ್ನ ತಿಂದ ಕಾರಣವೋ, ಯಾರಿಗೂ ನಿಷ್ಠೂರವಾಗದೆ ನಡೆಯುವುದು ಸರಿ ಕಾಣುವುದಿಲ್ಲ. ಓದುಗನ ನಿರೀಕ್ಷೆ ಏನಿರಬಹುದೋ ಅದು ಹುಸಿಯಾದಂತಾಗುತ್ತದೆ.

ಕಾಂಗ್ರೇಸ್ ದೇವಪ್ಪ ಊರಿನ ಸಾಮಾಜಿಕ ಪರಿವರ್ತನ ಕಾರರಲ್ಲಿ ಮಂಚೂಣಿಗಾರ ಊರಲ್ಲಿ ಪದವಿ ಮುಗಿಸಿದ ಮೊದಲಿಗ. ಗಾಂಧೀಜಿ ಅವರ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡು ಹೆಸರುವಾಸಿಯಾಗಿದ್ದ. ಜಾತ್ಯಾತೀತ ನೆಲೆಯಲ್ಲಿ ಇದ್ದ ಕಾರಣ ಊರವರು ಇವನನ್ನ ಖ್ಯಾರೇ ಎನ್ನುತ್ತಿರಲಿಲ್ಲ. ತನ್ನದೇ ಆದ ಗೌರವವು ಇವನಿಗಿತ್ತು. ದೇವಪ್ಪನ ಗಾಂಧಿ ತತ್ವಗಳು ಊರಿನವರಿಗೆ ಇರಿಸು-ಮುರಿಸು ತರಿಸುತ್ತಿದ್ದವು. ಜಾತೀಯತೆ, ಅಸಮಾನತೆ, ಮಡಿ ಮೈಲಿಗೆ ಆಚರಿಸುವುದು ದೇವಪ್ಪನಿಗೆ ಸ್ವಲ್ಪವೂ ಹಿಡಿಸುತ್ತಿರಲಿಲ್ಲ. ಊರಲ್ಲಿ ಯಾರೇ ಸಾಯಲಿ ಹೊಲಗೇರಿಯವರು ದೂರದಿಂದಲೇ ಆ ಅಂತ್ಯಕ್ರಿಯೆಯನ್ನು ನೋಡುತ್ತಿದ್ದರು. ದೇವಪ್ಪ ಮಾತ್ರ ಹೊಲಗೇರಿಯಲ್ಲಿ ಯಾರು ಸತ್ತರೂ ಅಲ್ಲಿಗೆ ಧಾವಿಸಿ ಕೊನೆಯವರೆಗೂ ಇರುತ್ತಿದ್ದ. ಇವನ ಜೊತೆ ಏಕತಾರಿಬಾಬ, ಮಾಣಿಕಪೂಜಾರಿ ಮೂವರು ಸೇರಿ ಜಾತಿಯ ಅಡ್ಡ ಗೋಡೆಯನ್ನು ಒಡೆಯುತ್ತಿದ್ದಾರೆಂಬ ಕೋಪ ಮೇಲು ಜಾತಿಯವರಿಗೆ ಸಹಿಸಲು ಆಗುತ್ತಿರಲಿಲ್ಲ. ನಿತ್ಯವು, ದೇವಪ್ಪನಿಗೆ ನೀರು ತಂದು ಕೊಡುವವನು ಹೊಲೇರ ಮಾನಿಂಗನ ಮಗ ಈ ದೃಶ್ಯ ನೋಡಿದ ಊರಿನ ಉತ್ತಮರು "ಬೇಕಾದ್ರ ಒಳಗಿಂದ ಒಳಗ ಯಾನರೆ ಕೆಲಸಾ ಮಾಡಿಸಿಕೊ ಆದ್ರ ಹಿಂಗ ಹುಬೆ ಹುಬೆ ಮಾಡಬ್ಯಾಡ ಜಾತಿಗಿ ಬಟ್ಟಾ ಬರತೈತಿ" ಆದರೂ ಇದಕ್ಕೆ ಉತ್ತರವಾಗಿ ದೇವಪ್ಪ ಹೌದು; ನಾನು ನಾಕೈಲಾಗದವ ಆ ಕಾರಣ ನಾನು ಅವನನ್ನೇ ನೀರು ತರಲು

ಹೇಳ್ತೇನೆ ಅದು ಜಾತಿಗೆ ಬುಟ್ಟಾ ಬರುತ್ತದೆ. ಅದೇ ಆ ಪರಪ್ಪ ರಾತ್ರಿಯಲ್ಲ ಚಂಪವ್ವ ಮನೆಯಲ್ಲಿ ಇದ್ದು ಬೆಳಗ್ಗೆ ಸ್ನಾನ ಮಾಡಿ ಬರ್ತ್ತಾನಲ್ಲ ಅದು ಜಾತಿ ಬುಟ್ಟಾ (ಮಲೀನ, ಮಡಿ) ಆಗಲ್ವ ಎಂದ.[6] ಇಲ್ಲಿ ಮನೆ ಒಳಗಡೆ ಕಾಣದಾಗ ಹೇಗೆ ಬೇಕಾದರೆ ಇರು, ಮನೆ ಹೊರಗೆ ಜಾತಿ ಕಟ್ಟು ಪಾಡು ಸರಿ ಪಾಲಿಸಯ್ಯ ಎನ್ನೋ ಮಾತಿನ ಅರ್ಥ, ವ್ಯವಸ್ಥೆಯಲ್ಲಿ ಜಾತಿ ಇರುವುದೇ ಶೋಷಣೆ, ವಂಚನೆಗೆ ಮಾತ್ರ ತಮಗೆ ಇಷ್ಟಬಂದಂತೆ ಜಾತಿ ನಿಯಮವನ್ನು ಸಡಿಲಿಸಿಕೊಳ್ಳುವ ಹಕ್ಕು ಇವರಿಗೆ ತಾನಾಗೆ ಬಂದಿರಬಹುದು. ಇದೇ ದಲಿತನೊಬ್ಬ ಈ ರೀತಿ ನಡೆದುಕೊಂಡರೆ ಸಾವು, ಸನಿಹ ಬರುವುದು ಖಚಿತ.

ದೇವೇಂದ್ರ ಪ್ರತಿಭಟನಾತ್ಮಕವಾಗಿ, ಜಾತಿ ವಿರೋಧಿಯಾಗಿ, ಮೌಢ್ಯ ಆಚರಣೆಗಳ ವಿರೋಧಿಸಿ ಸಾಮಾಜಿಕ ಚಳುವಳಿಯನ್ನು ಮಾಡುತ್ತಾನೆ. ಎಳೆ ವಯಸ್ಸಾದ ಕಾರಣ ಮನಸ್ಸು ನಿಯಂತ್ರಣವಿಲ್ಲದೆ, ಮಾರ್ಗದರ್ಶಕರಿಲ್ಲದೆ ಕೆಲವು ಆತುರದ ನಿರ್ಧಾರವನ್ನು ತೆಗೆದುಕೊಳ್ಳುತ್ತಿದ್ದ. ಇದರಿಂದಾಗಿ ಇವನ ಪ್ರತಿಭಟನೆ ವರ್ಗಕಲಹದ ಹಾದಿ ಹಿಡಿಯಿತು. ಪಾರ್ವತಿ ಮತ್ತು ದೇವೇಂದ್ರ ಓದಲು ಹೋಗಿ ಒಮ್ಮೆ ಊರಲ್ಲಿ ಭೇಟಿಯಾದಾಗ ಮಾತಿಗಿಳಿದು ಸಾಮಾಜಿಕ ಬದಲಾವಣೆ ಹೇಗೆ ಎಂಬ ಪ್ರಶ್ನೆಗೆ ಉತ್ತರ ಹುಡುಕುತ್ತಿರುವಾಗ ಪಾರ್ವತಿ ನಮ್ಮ ಕಾಲೇಜಿನಲ್ಲಿ ಸೆಮಿನಾರ್ ಇದೇ ಬಾ ಎಂದ ವೇಳೆ ನನಗೆ ಊರಿನಲ್ಲಿ ಕೆಲಸವಿದೆ ಎಂದಾಗ ಏನು ಕೆಲಸ ಎಂದು ಪ್ರಶ್ನಿಸಿದಾಗ ದೇವೇಂದ್ರ "ಅಲ್ಲಿ ಮಾಡಬೇಕಾದ ಕೆಲಸ ಬಾಳ ಅದಾವು ಬತ್ತಲೆಪೂಜೆ ಬಸವಿಪದ್ಧತಿ, ಪ್ರಾಣಿಹತ್ಯೆ ಇಂತಾವ ಅಂದ. ಇದವಳಿಗೆ ಆಶ್ಚರ್ಯವಾಯಿತು. ಅದಕ್ಕೆ ಉತ್ತರವಾಗಿ ಪಾರ್ವತಿ ಅಂದ್ರ ಬಸವಣ್ಣ ಕಳಬೇಡ, ಕೊಲಬೇಡ ಅಂದ ಅದು ಒಂದು ಮೌಲ್ಯ ಆಗಿ ಸರಿ. ಕೊಲುವವನೆಮಾದಿಗ ಹೊಲಸ ತಂಬುವನೆ ಹೊಲೆಯ ಅಂತೂ ಹೇಳಿದ ಆಹಾರ ಪ್ರಾಮಾಣ್ಯವನ್ನು ನಿರಾಕರಿಸಿದ ಅಂಬೇಡ್ಕರ ಸಿದ್ದಾಂತದ ಮುಂದು ಈ ಮಾತು ಹ್ಯಾಂಗ ಧ್ವನಿಸತ್ತೈತಿ?[7]

ಬಸವಣ್ಣ, ಅಂಬೇಡ್ಕರರ ಚಿಂತನೆ ಸಮಾನಾಗಿದ್ದರೂ, ಆಹಾರ ಪದ್ಧತಿಯಲ್ಲಿ ಮಾಂಸಹಾರಿಗಳಾದ ದಲಿತರಿಂದ ಪ್ರಾಣಿಬಲಿ ತಡೆಯುವುದು ಹೇಗೆ ಎಂದು ಪಾರ್ವತಿ ಪ್ರಶ್ನೆ ಹಾಕಿದ್ದಾಳೆ. ಆಹಾರ ಸೇವನೆ, ಜೀವಿ ಸಂಕುಲಕ್ಕೆ ಪ್ರಕೃತಿಯಲ್ಲಿ ಸಮಾನ ಅವಕಾಶಗಳು ದೊರೆತಿವೆ. ಹುಲಿ, ಸಿಂಹಗಳು ಸಸ್ಯಹಾರಿಗಳಲ್ಲ ಅವು ಮತ್ತೊಂದು ಪ್ರಾಣಿ ಬೇಟೆಯಾಡಿ ಆಹಾರ ಸೇವಿಸುತ್ತವೆ. ಅದಕ್ಕಾಗಿ ಹುಲಿ ಸಿಂಹಗಳನ್ನು ಸಾಯಿಸಲು ಸಾಧ್ಯವೇ ಆಹಾರದ ಸಂಪೂರ್ಣ ಆಯ್ಕೆ ಸ್ವತಂತ್ರ ಮಾನವನಿಗೆ ಪ್ರಕೃತಿ ದತ್ತವಾಗಿರುವುದರಿಂದ ಅದನ್ನು ಕಸಿದುಕೊಳ್ಳಲು ಕಾನೂನು ರೂಪಿಸುವುದು ಸರಿಯಲ್ಲ.

ದೇವೇಂದ್ರ ಮುಂದುವರೆದು ಊರಿನ ಜಾತ್ರೆಯಲ್ಲಿ ನಾಚಸೇವೆ ಎಂಬ ಅನಿಷ್ಟಪದ್ಧತಿ ತೊಡೆದು ಹಾಕುವ ಪ್ರಯತ್ನಕ್ಕೆ ಕೈಹಾಕಿ ಅಲ್ಲಿಂದಲೇ ಅಲ್ಲಿಂದರೆ ತನ್ನ ಚಳವಳಿ ಪ್ರಾರಂಭಿಸುತ್ತಾನೆ. ಹೀಗೆ ಊರಿನಲ್ಲಿ

6 ಪೂರ್ವೋಕ್ತ, ಪುಟ–70.

7 ಪೂರ್ವೋಕ್ತ, ಪುಟ–86.

ಜಾತ್ರೆಯ ಸಂದರ್ಭದಲ್ಲಿ ಭಕ್ತಿ ತಾರಕಕ್ಕೆ ಏರಿ ಮಾಣಿಕ ಪೂಜಾರಿ" ಎಲ್ಲಿ ಹುಡುಗಿಯರು ಕುಣೀಯಿರೇ ದೇವಿಗೆ ನಾಚಸೇವೆ ಮಾಡಿ ಎಂದು ಕೂಗುತ್ತಾನೆ. ಅವನಂದ ತಕ್ಷಣ ಅರಬೆತ್ತಲೆಯಾಗಿ ನಾಗಿ ಮತ್ತವಳ ಸಂಗಡಿಗರು ಕುಣಿಯಲು ಸುರು ಮಾಡುತ್ತಾರೆ. ಅಲ್ಲಿಗೆ ಬಂದ ದೇವೇಂದ್ರ 'ನಾಚಾ' ನಿಲ್ಲಿಸುವಂತೆ ಅಗ್ರಹಿಸುತ್ತಾನೆ. ಪೋಲೀಸರೊಂದಿಗೆ ಬಂದಿದ್ದ ದೇವೇಂದ್ರನ ಕಂಡು ಅಲ್ಲಿ ನಾಚ ಪದ್ಧತಿ ನಿಲ್ಲಿಸಲಾಯ್ತು ಅದೇ ಮಾರನೇ ದಿನ ಊರಿನಲ್ಲಿ ಇದೇ ರೀತಿ ನಾಚ ಸೇವೆಯನ್ನು ಮಾಡಲು ತಯಾರಿ ನಡೆಸಲಾಗಿತ್ತು. ಮಾಣಿಕ ಪೂಜಾರಿ ಎಂದಿನಂತೆ ಪೂಜೆ ಮುಗಿಸಿ ದೇವರು ಮೈಮೇಲೆ ಬಂದಂತೆ "ಕುಣಿಯಿರೇ ತಂದುಗೋಳ್ಯಾ" ಅವ್ವನ ಸೇವಾ ಮಾಡ್ರಿ" ಅಂದದ್ದೇ ತಡಾ ಹುಡುಗಿಯರು ಕುಣಿಯಲು ಸುರು ಮಾಡಿದರು. ಅಲ್ಲಿಗೆ ದೇವೇಂದ್ರ ಮತ್ತವನ ಸಂಗಡಿಗರು ಬಂದು ನಾಚ ಸೇವೆ ನಿಲ್ಲಿಸುವಂತೆ ಪ್ರತಿಭಟಿಸಿದರು. ಯಾಕಾ ನಿಂದ್ರಿಸಿದ್ರಿ ಕುಣೀರಿ... ಅಂದ ಪಾರಿಸ.

"ಏ ನಾಗಿ ತುಗಾ ನೂರರ ನೋಟ ಕುಣೀ ಕುಣೀ ಎಂದ ವೀರಭದ್ರ. ಆ ನೋಟನ್ನು ದೇವೇಂದ್ರ ಕಿತ್ತು ಮುದುರಿ ಜನಗಳೆಡೆಗೆ ಎಸೆದುದ್ದು ಕೋಪಕ್ಕೆ ಕಾರಣವಾಗಿ, ಯಾಕೋ ಹ್ಯಾಂಗ ಕಾಣತ್ತೈತಿ ಮಗನ ಅಂದ ವೀರಭದ್ರ ಹ್ಯಾಂಗ ಅಂದ್ರ ಯಾನೋ.. ನಮ್ಮ ಅಕ್ಕ ತಂಗ್ಯಾರು ಕುಣೀದಿಲ್ಲ ಅಂದ ದೇವೇಂದ್ರ. ಕುಣೀದಿಲ್ಲ ಅಂದ್ರ ಬಿಡಿತೀವ ಯಾನ? ಯಾಕ ಕುಣಿದಿಲ್ಲ? ಇದು ಈ ಊರ ರೀತಿ ರಿವಾಜ ಐತಿ ಎಂದೆಲ್ಲ. ತಲಾ ಒಬ್ಬಬ್ಬರೊಂದೊಂದು ಮಾತನ್ನು ಆಡ ತೊಡಗಿದಾಗ ದೇವೇಂದ್ರ" ನೋಡ್ರೀ.. ನಮ್ಮವರು ನಾಚ ಮಾಡದಿಲ್ಲ ಅಂದ್ರ ಇಲ್ಲ ನಿಮಗ ದೇವರ ಮ್ಯಾಲ ಅಟ್ಟೊಂದು ಭಕ್ತಿ ಇತ್ತು ಅಂದ್ರ ಮತ್ತು ನಾಚ ಸೇವ ದೇವಿಗೆ ಬೇಕ ಬೇಕು ಅನಿಸಿದ್ರ ನಿಮ್ಮ ಮನ್ಯಾಗ ಹುಡಗ್ಯಾರ ಕಡೆ ನಾಚ ಮಾಡಸರಿ ನಾವು ನೋಡ್ತೀವಿ ಅಂದ ದೇವೇಂದ್ರ. ಇದರಿಂದ ಕೋಪಗೊಂಡು ಮೇಲ್ವರ್ಗದ ಜನ ಕುಪಿತರಾಗಿ ಪರಿಸ್ಥಿತಿ ವಿಕೋಪಕ್ಕೆ ಹೋಗುತ್ತಿರುವುದನ್ನು ಗಮನಿಸಿದ ಮಹಾಂತಪ್ಪ ನೋಡ ತಮ್ಮ ಊರ ರೀತಿ ರಿವಾಜ ಅಂಗಿತ್ತ ಅದ್ಧ ಮಾಡು ಅಂದ್ವಿ ಬ್ಯಾಡ ಅಂದ್ರ ಬ್ಯಾಡ ಬಿಡು ತಮ್ಮ ಎಂದನು".[೮]

ಈ ಘಟನೆ ಆದ ಅನಂತರ ಎರಡು ಕೋಮಿನವರಿಗೂ ಸಂಬಂದ ಬಿರುಕು ಬಿಟ್ಟು, ಈ ಕೋಪವನ್ನು ಬಾವಿಗೆ ಬೀಗ ಹಾಕುವುದರ ಮೂಲಕ ಹಾಗೂ ದೇವಿ ಪೂಜಕ್ಕೆ ಕಲ್ಲು ಬಿದ್ದದ್ದು ಇವರಿಂದಲೇ. ಅಂದು ತಿಳದು ಬಾವಿಗೆ ಬೀಗ ಜಡಿದು ಹೊಲಗೇರಿ ಮಂದಿಗೆ ನೀರು ಕೊಡದೆ ದೌರ್ಜನ್ಯ ಎಸಗಲು ಮುಂದಾದರು. ದೇವೇಂದ್ರ ಅನಿಷ್ಟ ಪದ್ಧತಿ ನಿಲ್ಲಿಸಿ ಎಂದರೂ ಅದು ರೀತಿ ರಿವಾಜು ಎಂದು ಸಮರ್ಥಿಸುವ ಮೇಲು ಜಾತಿ ಜನ ಅದೇ ಅವರ ಅಕ್ಕ ತಂಗಿಯರನ್ನು ಕುಣಿಯಲು ಬಿಡಿ ಎಂದಾಗ ಕೋಪಗೊಂಡು ಹೊಡೆಯಲು ಸಿದ್ಧರಾಗುವುದು ಅವರ ಹೆಣ್ಣು ಮಕ್ಕಳು ಸುರಕ್ಷಿತವಾಗಿ, ದಲಿತ ಹೆಣ್ಣು ಮಕ್ಕಳು ಶೋಷಣೆಗಾಗಿಯೇ ಮೋಜಿಗಾಗಿಯೇ ಬಂದವರೇ? ಮನುಷ್ಯರಾದ ಮೇಲೆ ಎಲ್ಲ ಒಂದೇ. ಇವರಿಗಿರುವ ಗೌರವ, ಆತ್ಮಾಭಿಮಾನ, ಸ್ವತಂತ್ರ ದಲಿತ ಹೆಣ್ಣು ಮಕ್ಕಳಿಗೂ ಬೇಕು. ಅವರೇನು

೮ ಪೂರ್ವೋಕ್ತ, ಪುಟ-102.

ನಿರ್ಜೀವಿಗಳೇ ಶೋಷಣೆ ಒಪ್ಪಿಕೊಂಡು ಶೋಷಿತರು ಬದುಕುವ ತನಕ ಶೋಷಣೆಯನ್ನು ನಿರಂತರವಾಗಿ ನಡೆಯುತ್ತಲೇ ಇರುತ್ತದೆ ಪ್ರತಿಭಟಿಸಿ ನಿಂತಾಗ ಮಾತ್ರ ಅಸ್ತಿತ್ವ ಕಾಣಲು ಸಾಧ್ಯ.

"ಜಾತಿಯತೆ ಸಮಷ್ಟಿಯಂತೆ, ವ್ಯಷ್ಟಿ ಪ್ರಜ್ಞೆಯೂ ಹೌದು ಸಮಾಜ ಜಾತಿಯಾಗಿ ವ್ಯಕ್ತಿಯ ವ್ಯಕ್ತಿತ್ವದೊಳಗೆ ಬೇರು ಬಿಟ್ಟಿರುವುದನ್ನು ಕಾದಂಬರಿ ಮೂಲಕ ಶೋಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಅದಕ್ಕೆ ಬೇಕಾದ ವ್ಯಕ್ತಿನಿಷ್ಠ ನೆಲೆಯ ಘಟನೆಯನ್ನು ರಚನಾ ವಿನ್ಯಾಸದಲ್ಲಿ ಅಳವಡಿಸಿಕೊಂಡಿರುವ ತಂತ್ರ ಕೂಡ ಮಹತ್ವದ್ದಾಗಿದೆ. ಅಂತಹದೊಂದು ಪ್ರಸಂಗವನ್ನು ಮಾನವೀಯ ಪರವಾದ ಸಂಗತಿಯನ್ನು ಅತ್ಯಂತ ಸೃಜನಶೀಲವಾದ ಅನುಭವದೊಂದಿಗೆ ಅಭಿವ್ಯಕ್ತಿಗೊಳ್ಳುವ ರೀತಿ ಗ್ರಹಿಕೆಯ ನೆಲೆ ಹೃದಯಸ್ಪರ್ಶಿಯಾಗಿದೆ.[೯]

ಚಿನ್ನಪ್ಪನ ಹೆಂಡತಿ ಶಿವಬಸವ್ವ ಮತ್ತು ಹೊಲೇರ ರೇಣುಕವ್ವ ಹೊಲಕ್ಕೆ ಹೋಗುವ ದಾರಿಯಲ್ಲೊಮ್ಮೆ ಭೇಟಿಯಾಗುತ್ತಾರೆ. ಚಿನ್ನಪ್ಪ ಗುಡಿಯಲ್ಲಿ ಏಕಾತಾರಿ ಬಾಬಾನೊಂದಿಗೆ ಕಾಲಕಳೆಯುತ್ತಿದ್ದ ಕಾರಣ, ಸಂಸಾರದ ಸಂಪೂರ್ಣ ಜವಾಬ್ದಾರಿ ಶಿವಬಸವ್ವಳದ್ದಾಗಿತ್ತು. ಹೀಗೆ ಕಂಕುಳಲ್ಲಿ ಮಗು, ತಲೆಯಲ್ಲಿ ಸೌದೆ ಹೊತ್ತಿಕೊಂಡು ದಾರಿಯಲ್ಲಿ ಬರುವುದನ್ನು ನೋಡಿ ರೇಣುಕವ್ವ ಕನಿಕರದಿಂದ ಏನಾದರೂ ಒಂದು 'ಕೈಯೊಳಗಿಂದು ಕೊಡ್ರವ್ವೆ' ಎಂದು ಕೇಳುತ್ತಾಳೆ. ಇವಳಿಗೂ ಜಾತಿ ಸಂಕೋಚ ಅವಳಿಗೂ ಕೊಡಬೇಕೆನ್ನುವ ಆಸೆ ಇದ್ದರೂ ಜಾತಿ ಅಡ್ಡವಾಗಿದೆ. ಬುಟ್ಟಿಕೊಡುವುದು ತಪ್ಪಾಗುತ್ತೆಂದು ಸುತ್ತಲೂ ನೋಡಿ ಮಗುವನ್ನು ಕೊಟ್ಟಳು. ಇತ್ತ ಶಿವಬಸವ ಎಮ್ಮೆ ಓಡಲು ಆರಂಭಿಸಿ ಅದನ್ನು ಹಿಡಿದು ಬರುವೆನೆಂದು ಓಡಿ ಹೋದಾಗ, ಮಗು ಅಳುವುದನ್ನು ಹೆಚ್ಚುಮಾಡಿತ್ತು. ಎಷ್ಟೇ ಪ್ರಯತ್ನಿಸಿದರೂ ಮಗು ಅಳುವುದನ್ನು ನಿಲ್ಲಸದಿದ್ದಾಗ ರೇಣುಕವ್ವ ಮೊಲೆಗಳನ್ನು ಉಣಿಸಲು ಕೊಟ್ಟಾಗ ಮಗು ಆನಂದದಿಂದ ಚೀಪತೊಡಗಿತು. ಎಮ್ಮೆ ಹೊಡೆದುಕೊಂಡು ಶಿವಬಸವ್ವ ಬಂದು ನೋಡಲು ತಕ್ಷಣ ರೇಣುಕವ್ವ ತನ್ನ ಎದೆಯನ್ನು ಕಿತ್ತು ಸರಿಪಡಿಸುವುದನ್ನು ಕಂಡು "ಅಯ್ಯ ರೇಣವ್ವ ಹಾಂಗ ಮಾಡಬ್ಯಾಡ ನಿನ್ನಾಣೆ ಹಾಲಕುಡಿಯುವ ಕೂಸಾ ಬಿಡಿಸಿ ಯಾವ ಪಾಪಕ್ಕೆ ಹೊಕ್ಕಿ? ಎಂದಳು ಇಲ್ಲಿ ಇಬ್ಬರಲ್ಲೂ ತಾಯ್ತನದ ಮನಸ್ಸು ಜಾಗೃತಗೊಂಡು ಸುಪ್ತಮನಸ್ಸಿನ ಗ್ರಹಿಕೆಯಾಗಿ ಅಭಿವ್ಯಕ್ತಗೊಂಡ ರೀತಿ ಮಾನವೀಯತೆಯ ಸ್ಥಿತಿಯಲ್ಲಿ ಇಡೀ ಪ್ರಸಂಗವನ್ನು ಲೇಖಕರು ಕಂಡಿರುವುದು ಅಮೋಘ, ಅಪರೂಪದ ಸಂದರ್ಭವಾಗಿದೆ. ಜಾತಿಗಿಂತ ಮನುಷ್ಯತ್ವ ಮುಖ್ಯವೆಂದು ನಾವಿಲ್ಲಿ ಅರಿಯಬಹುದು.

ಲೋಹಿಯಾ, ಅಂಬೇಡ್ಕರ್, ಮಾರ್ಕ್ಸ್ ಅವರ ಸಿದ್ಧಾಂತಗಳನ್ನು ಓದಿಕೊಂಡು ಅವರ ಚಿಂತನೆಗಳನ್ನು ತನ್ನಲ್ಲಿ ತುಂಬಿಕೊಂಡ ದೇವೇಂದ್ರ, ದಲಿತರು ಯಾಕೆ ಇನ್ನೂ ಬದಲಾಗಿಲ್ಲ, ಸುಧಾರಣೆಗೆ ಒಳಪಟ್ಟಿಲ್ಲ, ಎಂದು ಆಲೋಚನೆ ಮಾಡುತ್ತಾನೆ. ಮೇಲ್ವರ್ಗದವರ ಸ್ವಾರ್ಥ, ಕೆಳವರ್ಗದವರ ಗುಲಾಮಗಿರಿ, ಮೌಢ್ಯದ ಅಂಧಾನುಕರಣೆ ಇವರನ್ನು ಈ ಸ್ಥಿತಿಗೆ ನೂಕಿದೆ. ನಾವು ಇತರರಿಗಿಂತ

೯ ಡಾ. ಬಾಳಾಸಾಹೇಬ ಲೋಕಾಪುರ ಕಥನ ಸಂವಾದ – ಸಂ.ವೆಂಕಟಗಿರಿದಳವಾಯಿ, 2011, ಪುಟ. 55.

ಭಿನ್ನವಾಗಿರಬೇಕೆಂಬುದು ಇವನ ಇಂಗಿತ. ದೇವೇಂದ್ರ ತಾನು ಯಾವುದು ನೀಚಕೃತ್ಯ ಅದನ್ನು ಮೊದಲು ತೊಡೆದು ಹಾಕಬೇಕೆಂದು ಹಂಬಲಿಸುತ್ತಿದ್ದರೆ ಅವನದೇ ಜಾತಿ ಜನ ಅದನ್ನು ನೋಡಿಕೊಂಡು ಕುಣಿದು ಸಂತೋಷಪಟ್ಟ ಕುಣಿಯುತ್ತಿದ್ದಾರೆ ಇದು ವಿಪರ್ಯಾಸ. ಈ ನಾಚ್ ಪದ್ಧತಿ ತಡೆದ ನಂತರ ಸಾಮಾಜಿಕ ಸಂಘರ್ಷಕ್ಕೆ ಇಲ್ಲಿ ಎಡೆ ಮಾಡಿಕೊಟ್ಟಂತಾಗಿ ಅಸಮಾಧಾನಗೊಂಡ ಮೇಲ್ವರ್ಗದ ಜನ ಸಾಮಾಜಿಕ ಬಹಿಷ್ಕಾರ ಎಂಬ ಕ್ರೂರವರ್ತನೆಗೆ ಕೈ ಹಾಕುತ್ತಾರೆ.

ಬಾವಿಗೆ ಬೀಗ ಹಾಕಿ ಆ ಓಣಿಯ ಮುಗ್ಧ ಜನರಿಗೆ ನೀರು ಕೊಡಲು ನಿರಾಕರಿಸಿ ದಲಿತರನ್ನು ನೋಯಿಸಿ, ಹಾಹಾಕಾರವಾಗಿ ಮಕ್ಕಳು ಮರಿ, ದನಕರು, ಮೇಕೆ ಪ್ರಾನಿಗಳು ನೀರಿಲ್ಲದೆ ಪರದಾಡುವಂತಾಯಿತು. ದ್ಯಾವಪ್ಪ, ಬಾಬಾ ಮುಂತಾದವರು. ಬಂದು ಹೇಳಿದರೂ ಬದಲಾಗದ ನಿರ್ಧಾರ. ಸತ್ಯಗ್ರಹಕ್ಕೆ ಕೂತ ದ್ಯಾವಪ್ಪ ಸತ್ತರು ನೀರನ್ನು ಕೂಡಲೇ ಇಲ್ಲ. ಪೋಲೀಸರು ಬಂದು ಸ್ಥಿತಿಯನ್ನು ದಮನಗೊಳಿಸಿ ದಲಿತರಿಗೆ ನೀರು ಕೊಡೋ ವ್ಯವಸ್ಥೆ ಮಾಡಿಸುತ್ತಾರೆ. ಈ ನಡುವೆ, ಮಲ್ಲು ನಾಗುವಿನ ಪ್ರೇಮ ಪ್ರಸಂಗ ಜಾತಿಯೆಂಬ ಮುಳ್ಳು ಬೇಲಿಯನ್ನು ದಾಟಿ ಬೆಳೆಯುತ್ತದೆ. ನಾಗು ಹೊಲೇಲ ತಾರವ್ವನ ಮಗಳು ಮಲ್ಲು ಮೇಲುಜಾತಿಯ ಪದಮಣ್ಣ ರಾಜವ್ವನ ಮಗ. ಮಲ್ಲು ಮೇಲ್ಜಾತಿಯವ, ನಾಗಿ ದೇವದಾಸಿ ಮಗಳು ಇವರಿಬ್ಬರ ಪ್ರೀತಿಯಲ್ಲಿ ಜಾತಿಯಾಗಲಿ, ಸ್ಥಾನಮಾನಗಳಾಗಲಿ, ಅಡ್ಡಿ ಬರುವುದಿಲ್ಲ. ಈ ಪ್ರೇಮ ಆದರ್ಶದ ಪ್ರತೀಕವಾಗಿದೆ. ತಾರವ್ವಳಿಗೆ ಹಣ ಮುಖ್ಯ ಹೊರತು ಪ್ರೇಮವಲ್ಲ. ಮಲ್ಲು ಮಗಳ ನೋಡುವುದು, ಮನಗೆ ಬರುವುದು, ಮದುವೆ, ಇದರಲ್ಲಿ ಅವಳಿಗೆ ನಂಬಿಕೆ ಇದರ ಕಾರಣ ಅವಳಲ್ಲಿ ತುಸು ವಿರೋಧವಿತ್ತು. ಆದರೂ ಮಲ್ಲು ಒಂದು ದಿನ ರಾತ್ರಿ ಮನೆಗೆ ಬಂದು ತಾರವ್ವಳಿಗೆ ಹಣ ಕೊಟ್ಟು ನಾಗಿಯನ್ನು ಕರೆದುಕೊಂಡು ಬೇರೆ ಊರಿಗೆ ಪ್ರಯಾಣ ಬೆಳೆಸುತ್ತಾರೆ. ಜಾತ್ಯಾತೀತವಾಗಿ ಬದುಕು ಸಾಗಿಸುವವರಿಗೆ ಈ ಬದಲಾವಣಗೆ ಆದರ್ಶವಾಗಿದೆ. ಗ್ರಾಮೀಣ ಭಾಗದಲ್ಲಿ ಇಂತಹ ಬದಲಾವಣೆಯ ಗಾಳಿ ಬೀಸುತ್ತಿರುವುದು ಸೃಜನಾತ್ಮಕ ಅಂಶವಾಗಿದೆ.

ಹೀಗಿದ್ದರು ಈ ಕಾದಂಬರಿಯಲ್ಲಿ ಕೆಲವು ವಿಚಿತ್ರ ಘಟನೆಗಳು ನಡೆದು ಹೋಗುತ್ತದೆ. ಕೊಲ್ಲಾಪುರದಿಂದ ತಂದೆ ಶಿವನೇರ ಮುತ್ತಪ್ಪ ಪೈಲ್ವಾನನ ಹುಡುಕಲು ಬಂದು ರತ್ನಮಾಲ ಊರಿನ ಪರಿಸ್ಥಿತಿ ಅರಿತು ದಲಿತರಿಗೆ ಉಚಿತ ಬಾವಿ, ನೀರು, ಊಟ ಕೊಡುವುದಾಗಿ ಭರವಸೆ ನೀಡಿ, ಮೋಸ ಮಾಡಿ, ದಲಿತರನ್ನು ವಂಚಿಸಿ, ಶೋಷಣೆ ಮಾಡುವುದು, ಚಂಪವ್ವನ ಮಗ ಮಾಣಿಕ ಪೂಜಾರಿಯಾಗಿ ಮಾರ್ಪಾಟಾದದ್ದು. ದೇವಪ್ಪ ಊರಿನ ಕೆಲವು ಮುಖ್ಯ ಸಂದರ್ಭದಲ್ಲಿ ಕಾಣದೆ ಇರುವ ಪ್ರಸಂಗ ಪ್ರಮುಖ ಕೊರತೆಯಾಗಿ ಭಾಸವಾಗುವುದು ಪಾರ್ವತಿ ದಲಿತರ ಕೇರಿಗೆ ಭೇಟಿ ಕೊಟ್ಟಾಗ ಅವಳ ಹಿಂದೆ ಹೋಗಿ ಜೈಕಾರ ಹಾಕಿ ದೇವತೆ ಎಂಬಂತೆ ಜೈಕಾರ ಹಾಕುವುದು. ಇದೆಲ್ಲವೂ ದಲಿತರ ಮೌಢ್ಯ ಕಂದಾಚಾರವನ್ನು ಬಿಂಬಿಸುವಂತಿದೆ.

ಒಟ್ಟಾರೆಯಾಗಿ; ಲೋಕಾಪುರ ಅವರ ಉದೋ ಉದೋ ಕಾದಂಬರಿಯಲ್ಲಿ ಜಾತಿ ಪದ್ಧತಿಯ ವಿವಿಧ ಕವಲುಗಳನ್ನು, ಹಾಗೂ ಊಳಿಗಮಾನ್ಯ ವ್ಯವಸ್ಥೆ ತನ್ನಲ್ಲಿ ಹೇಗೆ ಹಿಡಿದಿಟ್ಟುಕೊಂಡಿತ್ತು. ಕೆಳವರ್ಗದ ಜನರನ್ನು ಅವಮಾನವೀಯವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ, ಧಾರ್ಮಿಕವಾಗಿ ಹೇಗೆ ತುಳಿತಕ್ಕೆ ತಳ್ಳಿ ತಮ್ಮ ಜಾತಿತನವನ್ನು ಬಿತ್ತರಿಸಿ ಶೋಷಿಸುವ ಪರಿಯನ್ನು ಇಲ್ಲಿ ಕಾಣಬಹುದು.

**ಗ್ರಂಥ ಋಣ**


1. ಉಧೋ ಉಧೋ– ಬಾಳಾಸಾಹೇಬ ಲೋಕಾಪುರ–ಮನೋಹರ ಗ್ರಂಥಮಾಲ ಲಕ್ಷ್ಮೀ ಭವನ್, ಸುಭಾಷ್ ರಸ್ತೆ, ಧಾರವಾಡ–2005
2. ದಲಿತ ಕಥನ– ಮೊಗಳ್ಳಿ ಗಣೇಶ್, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ–2006
3. ವೆಂಕಟಗಿರಿ ಧಳವಾಯಿ–ಡಾ.ಬಾಳಾಸಾಹೇಬ ಲೋಕಪುರ ಕಥನ ಸಂವಾದ–ಕರ್ನಾಟಕ ಸಾಹಿತ್ಯ ಅಕಾಡೆಮಿ ಕನ್ನಡ ಭವನ,ಜೆ.ಸಿ ರಸ್ತೆ, ಬೆಂಗಳೂರು–2011